

ನಡೆಸಿದ ಈ ಪ್ರದರ್ಶನದಲ್ಲಿ ಆರು ರಾಜ್ಯಗಳ ಸುಮಾರು 2,184 ಗೊಂಬೆಗಳು ಹಾಜರಿದ್ದವು. ಗೊಂಬೆಗಳ ಈ ಮಹಾಮೇಳ '2018ರ ವಿಶ್ವದಾಖಲೆ' ಗಿನ್ನೆಸ್ ಪಟ್ಟಿಯನ್ನು ಸೇರಿಕೊಂಡಿತು.

## 'ಸಂಸ್ಕೃತ' ಸಂಬಂಧ

'ಸಂಸ್ಕೃತ ಗೊಂಬೆ ತಯಾರಿಕಾ ಸಂಸ್ಥೆ' ಪ್ರಾರಂಭವಾಗಿದ್ದು 2018ರಲ್ಲಿ. ಇದು ಭಾರತದ ವಿವಿಧ ರಾಜ್ಯಗಳಲ್ಲಿ ತನ್ನ ಬಳಗವನ್ನು ಹೊಂದಿದೆ. ಮಹಿಳೆಯರಿಗೆ ಅವರ ಕೌಶಲಗಳನ್ನು ಬಳಸಿಕೊಂಡು ಸ್ವಾವಲಂಬಿ ಜೀವನ ನಡೆಸಲು ಸಹಕಾರಿಯಾಗಬೇಕೆಂಬ ಸದುದ್ದೇಶವನ್ನಿಟ್ಟುಕೊಂಡು ಈ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ. ಅಂದರೆ ಇಲ್ಲಿ ಮಿನುಗುತ್ತಿರುವ ಗೊಂಬೆಗಳು ಎಷ್ಟೋ ಹೆಂಗಳೆಯರ ಬದುಕಲ್ಲಿ ನಗು ಅರಳಿಸಿವೆ. ಚೆನ್ನೈನಲ್ಲಿ ಮುಖ್ಯಕಚೇರಿಯನ್ನು ಹೊಂದಿರುವ ಸಂಸ್ಥೆಯ ನಿರ್ದೇಶಕಿ ಕಲ್ಯಾಣಿ ದೇವನಾಥನ್. ಪ್ರಸ್ತುತ 70 ಜನ ಮಹಿಳೆಯರು ಈ ಸಂಘದಲ್ಲಿ ಸದಸ್ಯತ್ವ ಪಡೆದಿದ್ದಾರೆ.

ಮಹಿಳೆಯರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ನೆರವಾಗುವುದು ಸಂಸ್ಕೃತ ಸಂಸ್ಥೆಯ ಮುಖ್ಯ ಉದ್ದೇಶ. ಗ್ರಾಮೀಣ, ನಗರ ಪ್ರದೇಶದ ಸದಸ್ಯರ ಜೊತೆಗೆ ತೃತೀಯಲಿಂಗಿಗಳ ಏಳಿಗೆಗೂ ಈ ಸಂಸ್ಥೆ ಶ್ರಮಿಸುತ್ತಿದೆ.

ಗೊಂಬೆ ತಯಾರಿಕೆ ಮತ್ತು ಇತರೆ ಕರಕುಶಲ ವಸ್ತುಗಳನ್ನು ಸ್ವತಃ ತಾವೇ ಮನೆಯಲ್ಲಿ ಹೇಗೆ ತಯಾರಿಸಬಹುದು ಎಂಬುದರ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಶಾಲೆಗಳು ಹಾಗೂ ಇತರ ಸರ್ಕಾರೇತರ ಸಂಸ್ಥೆಗಳಲ್ಲಿ ಬಳಗದ ಸದಸ್ಯರು ಕಾರ್ಯಾಗಾರ ನಡೆಸುತ್ತಾರೆ.

'ಪ್ರತಿ ವರ್ಷ ಒಂದೊಂದು ರಾಜ್ಯದಲ್ಲಿ ಮಹಿಳೆಯರು ತಯಾರಿಸಿದ ಗೊಂಬೆಗಳನ್ನು ಪ್ರದರ್ಶನಕ್ಕಿಡಲಾಗುತ್ತದೆ. ಈ ಪ್ರದರ್ಶನದ ಮೂಲಕ ಮಹಿಳೆಯರ ಪ್ರತಿಭೆಯನ್ನು ಗುರುತಿಸಿ ಅವರ ಕೌಶಲಗಳನ್ನು ಉತ್ತೇಜಿಸುವ ಜೊತೆಗೆ ಪ್ರಮಾಣಪತ್ರವನ್ನೂ ನೀಡಿ ಪ್ರಶಂಸಿಸಲಾಗುವುದು. ಗೊಂಬೆಗಳು ಮತ್ತು ಇತರ ಕರಕುಶಲ ವಸ್ತುಗಳನ್ನು ತಯಾರಿಸಲು ಬೇಕಾದ ಕಚ್ಚಾವಸ್ತುಗಳನ್ನು ಸಂಗ್ರಹಿಸಲು ಸಂಘ ಸಹಕರಿಸುತ್ತಿದೆ' ಎನ್ನುತ್ತಾರೆ ಸಂಸ್ಥೆಯ ಕಾರ್ಯದರ್ಶಿ ರೂಪಾ ಸಂಜಯ್.

## ಬಹುತ್ವದ ಗೊಂಬೆಗಳು

ತಂಜಾವೂರಿನ ಮರಪಚಿ ಗೊಂಬೆಗಳು, ಆಂಧ್ರಪ್ರದೇಶದ ಕೊಂಡಪಲ್ಲಿ ಗೊಂಬೆಗಳು, ತಿರುಪತಿಯ ಮರದ ವಿಗ್ರಹಗಳು, ಚನ್ನಪಟ್ಟಣದ ಚಂದದ ಗೊಂಬೆಗಳು, ರಾಜಸ್ತಾನದ ಕೈಗೊಂಬೆಗಳು, ಪಶ್ಚಿಮ ಬಂಗಾಳದ ಬಟ್ಟೆಯಿಂದ ತಯಾರಿಸಿದ ಗೊಂಬೆಗಳು, ತಮಿಳುನಾಡಿನ ಮಣ್ಣಿನ ಗೊಂಬೆಗಳು, ಜನಪದ ನೃತ್ಯ ಮಾದರಿಯ ಗೊಂಬೆಗಳು – ಹೀಗೆ ವಿವಿಧ ರಾಜ್ಯಗಳ ಗೊಂಬೆಕಲೆಯನ್ನು ಸಂಕೇತಿಸುವ ವಿವಿಧ ವಿನ್ಯಾಸದ ಗೊಂಬೆಗಳನ್ನು ಕಲಾವಿದೆಯರು ತಯಾರಿಸುತ್ತಾರೆ.

ಮದುವೆ ಸಮಾರಂಭದಲ್ಲಿ ಈ ಗೊಂಬೆಗಳಿಗೆ ಹೆಚ್ಚು ಬೇಡಿಕೆ ಇರುತ್ತದೆ. ದಸರಾದಂತಹ ವಿಶಿಷ್ಟ ಹಬ್ಬಗಳಲ್ಲೂ ಬೇಡಿಕೆ ಇದ್ದು, ಕಲಾವಿದೆಯರಿಗೆ



ಸಂಸ್ಕೃತಿ ಸಂಸ್ಥೆ ಸದಸ್ಯರು ತಯಾರಿಸಿದ ಗೊಂಬೆ



ಕಲ್ಯಾಣಿ ದೇವನಾಥನ್



ರೂಪಾ ಸಂಜಯ್

ಉತ್ತಮ ಆದಾಯವಿದೆ. ಸಾಮಾನ್ಯವಾಗಿ ಗಣ್ಯರನ್ನು ಸನ್ಮಾನಿಸಲು ಹಾಗೂ ಉಡುಗೊರೆ ನೀಡಲು ಈ ಗೊಂಬೆಗಳನ್ನು ಹೆಚ್ಚಾಗಿ ಬಳಸುತ್ತಾರೆ.

ಮದುವೆಗೆ ಸಿಂಗಾರಗೊಂಡ ಅಯ್ಯಂಗಾರ್ ಶೈಲಿಯ ವಧು–ವರ, ಕೃಷ್ಣ–ರುಕ್ಮಿಣಿ, ಮೀನಾಕ್ಷಿ–ಸುಂದರೇಶ್ವರ, ಭಾರತೀಯ ಮಹಾಕಾವ್ಯಗಳ ಕಥೆಗಳು, ವಿವಾಹ ಸಮಾರಂಭದ ಸೌಂದರ್ಯ, ಗ್ರಾಮೀಣ ಸೊಗಡು ಹಾಗೂ ಜನಪದ ನೃತ್ಯಗಳು, ಉತ್ಸವಗಳು ಮತ್ತು ಸುಗ್ಗಿಯ ಆಚರಣೆಗಳು – ಹೀಗೆ ದೇಸಿ ಸಂಸ್ಕೃತಿಯನ್ನು ಪ್ರತಿನಿಧಿಸುವ ಗೊಂಬೆಗಳು ನೋಡುಗರನ್ನು ಮರುಳು ಮಾಡುವಂತಿವೆ.

## ಅನುಪಯುಕ್ತ ಕಚ್ಚಾ ವಸ್ತುಗಳು

'ಸಂಸ್ಕೃತ' ಬಳಗದ ಬಹುತೇಕ ಕಲಾವಿದರು ತಮ್ಮ ಕರಕುಶಲ ವಸ್ತುಗಳಿಗೆ ಮತ್ತು ಗೊಂಬೆಗಳ ತಯಾರಿಗೆ ಬೇಕಾಗುವ ವಸ್ತುಗಳನ್ನು ಮಾರುಕಟ್ಟೆಯಿಂದ ಕೊಳ್ಳುವುದಿಲ್ಲ. ಅನುಪಯುಕ್ತ ಬಾಟಲಿಗಳು, ದಿನಪತ್ರಿಕೆ, ಹಳೆಯ ಬಟ್ಟೆಗಳನ್ನು ಕಚ್ಚಾ ವಸ್ತುಗಳಾಗಿ ಬಳಸುತ್ತಾರೆ. ಜೋಳದ ಎಲೆ, ಕಾರ್ಡ್‌ಬೋರ್ಡ್, ಮಣ್ಣು ಹಾಗೂ ಸಮುದ್ರದಲ್ಲಿ ಸಿಗುವ ಕಪ್ಪೆ ಚಿಪ್ಪುಗಳು, ಮುತ್ತು, ಹತ್ತಿ... ಹೀಗೆ ನಮ್ಮ ನಡುವೆ ದೊರೆಯುವ ವಸ್ತುಗಳೇ ಗೊಂಬೆಗಳ ತಯಾರಿಗೆ ಬಳಕೆಯಾಗುತ್ತವೆ.

ಹೂಗುಚ್ಛ ತಯಾರಿ, ಎಂಬ್ರಾಯಿಡರಿ, ಬೊಂಬೆಗಳಿಗೆ ಅಲಂಕಾರ, ಬಟ್ಟೆ ಹೊಲೆಯುವುದು, ಕಿವಿ ಓಲೆ, ಬಳೆ, ಸರ ಇನ್ನಿತರ ವಸ್ತುಗಳನ್ನು ತಯಾರಿಸುವ ವಿಧಾನವನ್ನು ಸಂಸ್ಥೆಯಲ್ಲಿ ಕಲಿಸಿಕೊಡಲಾಗುತ್ತದೆ. ವಿವಿಧ ಬಗೆಯ ಅಡುಗೆ ತಯಾರಿಯನ್ನೂ ಹೇಳಿಕೊಡಲಾಗುತ್ತದೆ.

ಮಹಿಳೆಯರು ತಾವು ತಯಾರಿಸಿದ ಗೊಂಬೆಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡಲು ಅಂಗಡಿ ಮಳಿಗೆಗಳ ವ್ಯವಸ್ಥೆಯನ್ನು ಸಂಸ್ಥೆಯ ವತಿಯಿಂದ ಮಾಡಲಾಗುತ್ತದೆ. ಆನ್‌ಲೈನ್‌ನಲ್ಲಿ ಮಾರಾಟ ಮಾಡುವ ಅವಕಾಶಗಳನ್ನೂ ಕಲ್ಪಿಸಿಕೊಡಲಾಗಿದೆ. ಸುಮಾರು 3 ಇಂಚಿನಿಂದ ಹಿಡಿದು 8 ಇಂಚಿನವರೆಗಿನ ಗೊಂಬೆಗಳು ಮಾರಾಟಕ್ಕೆ ಲಭ್ಯವಿವೆ.

ಸಂಸ್ಕೃತ ಗೊಂಬೆ ತಯಾರಿಕಾ ಸಂಸ್ಥೆ ತಯಾರಿಸಿದ ಗೊಂಬೆಗಳನ್ನು ಕೊಳ್ಳಲು ಹಾಗೂ ಸಂಸ್ಥೆಯ ಬಗ್ಗೆ ತಿಳಿಯಲು dollsncrafts.com ಜಾಲತಾಣಕ್ಕೆ ಭೇಟಿ ನೀಡಬಹುದು.

ಈ ಪುಟ ವೀಕ್ಷಣೆಗೆ bit.ly/2SEn9Lv ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.